## ಒಂದನೇ ಹೆಚ್ಚುವರಿ ಕಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ.

### ಸಿಸಿ ನಂ: 1429/2019

| ಪಿರ್ಯಾದುದಾರ ವಿರುದ್ಧ | ಆರೋಪಿ |
|---|---|
| ಶ್ರೀ ಲಕ್ಷ್ಮೀ ಕ್ರೆಡಿಟ್ ಕೋ ಆಪ್ ಸೊಸೈಟಿ, ಹರಿಹರ ಪರವಾಗಿ ಕಾರ್ಯದರ್ಶಿ, ಶ್ರೀಮತಿ ವಿಜಯಲಕ್ಷ್ಮೀ. ಆರ್ ತಂದೆ ರಂಗಣ್ಣ, 39 ವರ್ಷ, ಹರಿಹರ. | ಶ್ರೀ ಕರಿಬಸವರಾಜ ತಂದೆ ಹಾಲಪ್ಪ, ವಾಸ: ಕುರುಬರ ಬೀದಿ, ಹರಿಹರ, ಮತ್ತು ಗಾಯತ್ರಿ ಹೋಟೆಲ್ ಪಕ್ಕ, ಮೇನ್ ರಸ್ತೆ, ಹರಿಹರ. |

**ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರ ಪ್ರಕಾರ ಆರೋಪಿಯ ಹೇಳಿಕೆ**

1. ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿದಂತಹ ಪಿರ್ಯಾದುದಾರರ ಸಾಕ್ಷಿ ವಿಚಾರಣೆಯನ್ನು ಕೇಳಿರುತ್ತೀರಾ?

ಉ: ಆ.1 ಕೇಳಿದ್ದೇನೆ

2. ಪಿರ್ಯಾದುದಾರರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ನೀವು ದಿನಾಂಕ: 03.12.2016 ರಂದು ಶ್ರೀ ಲಕ್ಷ್ಮೀ ಕ್ರೆಡಿಟ್ ಕೋ ಆಪ್ ಸೊಸೈಟಿ ಲಿ, ಹರಿಹರ (ಪಿರ್ಯಾದುದಾರರು) ರವರ ಬಳಿ ರೂ. 50,000/ ಗಳನ್ನು ಸಾಲವನ್ನು ಪಡೆದಿದ್ದು, ಸದರಿ ಸಾಲದ ಮರುಪಾವತಿಗಾಗಿ ಆರೋಪಿತನಾದ ನೀನು ಪಿರ್ಯಾದುದಾರ ರವರ ಹೆಸರಿಗೆ ನಿಮ್ಮ ಬಾಬ್ತು ಚೆಕ್ ನಂ: 742309 ದಿನಾಂಕ: 01.07.2019 ರೂ. 54,053/ ಎಂದು ನಮೂದಿಸಿ ಪಿರ್ಯಾದಿದಾರರಿಗೆ ಕೊಟ್ಟಿರುತ್ತೀರಿ ಅಂತ ಸಾಕ್ಷ್ಯ ನುಡಿದಿರುತ್ತಾರೆ, ಅದಕ್ಕೆ ನೀವು ಏನು ಹೇಳುತ್ತಿರಿ?

ಉ: ಆ.1 ಸುಳ್ಳು

3. ಪಿರ್ಯಾದುದಾರರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಮುಂದುವರಿದು ಸದರಿ ಚೆಕ್ ನ್ನು ದಿನಾಂಕ 4.07.2019 ರಂದು ಐ ಸಿ ಐ ಸಿ ಐ ಬ್ಯಾಂಕ್ ಲಿಮಿಟೆಡ್, ಹರಿಹರ ಶಾಖೆಗೆ ಹಾಜರುಪಡಿಸಿದಾಗ ಅದು ಅಮಾನ್ಯಗೊಂಡಿದ್ದು "Funds insufficient" ಅಂತ ಹೇಳಿ ವಾಪಸ್ಸು ಬಂದಿರುತ್ತದೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ, ಅದಕ್ಕೆ ನೀವು ಏನು ಹೇಳುತ್ತೀರಿ?

ಉ: ಆ.1 ಸುಳ್ಳು

4. ಪಿರ್ಯಾದುದಾರರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಮುಂದುವರಿದು ನಿನಗೆ ದಿನಾಂಕ

ಕರಿಬಸವರಾಜ

15.07.2019 ರಂದು ಲೀಗಲ್ ನೋಟಿಸನ್ನು ನೀಡಿದ್ದು, ಸದರಿ ನೋಟಿಸ್ "party not claimed and return to sender" ಎಂಬ ಷರದೊಂದಿಗೆ ವಾಪಾಸಾಗಿದ್ದು ನೋಟಿಸಿಗೆ ಯಾವುದೇ ಪ್ರತ್ಯುತ್ತರವನ್ನು ಕೊಟ್ಟಿರುವುದಿಲ್ಲ ಮತ್ತು ಚೆಕ್ಕಿನ ಹಣವನ್ನು ಕೊಟ್ಟಿರುವುದಿಲ್ಲ ಅಂತ ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿರುತ್ತಾರೆ, ಅದಕ್ಕೆ ನೀವೇನು ಹೇಳುತ್ತೀರಿ ?

ಉಃ ಆ.1 ಸುಳ್ಳು

5. ನಿಮ್ಮ ಪರವಾಗಿ ಏನನ್ನಾದರೂ ಹೇಳುವುದು ಇರುತ್ತದೆಯೇ ?

ಉಃ ಆ.1 ಇಲ್ಲ

6. ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ ?

ಉಃ ಆ.1 ಸಾಕ್ಷಿ ವಿಚಾರಣೆ ಮಾಡಿಸುತ್ತೇನೆ

(ಆರೋಪಿತನಿಗೆ ಮುಕ್ತ ನ್ಯಾಯಾಲಯದಲ್ಲಿ ಆತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಯಿತು, ನೀಡಿದಂತಹ ಉತ್ತರವನ್ನು ಬರೆದುಕೊಳ್ಳಲಾಯಿತು)

ದಿನಾಂಕಃ

ಸ್ಥಳಃ ಹರಿಹರ

1 ನೇ ಹೆಚ್ಚುವರಿ ಕಿರಿಯ ಸಿವಿಲ್ ನ್ಯಾಯಾಲಯ
ಮತ್ತು ಜೆ ಎಂ ಎಫ್ ಸಿ, ಹರಿಹರ.

Scanned with OKEN Scanner